5) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಅರಿಕಟ್ಟೆ.

ಆ) ರಾಜ್ಯದಲ್ಲಿ 2015–16 ನೇ ಸಾಲಿನಲ್ಲಿ ನಬಾರ್ಡ್ ಕಾಮಗಾರಿಗಳಡಿಯಲ್ಲಿ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳ ನೂತನ ಕಟ್ಟಡ ನಿರ್ಮಿಸಲು ₹ 3000.00 ಲಕ್ಷಗಳನ್ನು ಮೀಸಲಿಡಲಾಗಿದೆ.

ಇ) 2014–15 ನೇ ಸಾಲಿನ RIDF–20 ರಲ್ಲಿ ಪಶು ಚಿಕಿತ್ಸಾಲಯ, ಹಂಸಭಾವಿ ಕಟ್ಟಡದ ನಿರ್ಮಾಣಕ್ಕಾಗಿ ₹ 27.25 ಲಕ್ಷ ಮಂಜೂರಾಗಿದ್ದು, ಪ್ರಸಕ್ತ ಸಾಲಿನಲ್ಲಿ ನೂತನ ಕಟ್ಟಡದ ಕಾಮಗಾರಿ ಪ್ರಾರಂಭವಾಗಿದೆ. RIDF–21 ರಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಗುಡ್ಡದಮಾದಾಪುರ ಕಟ್ಟಡದ ನಿರ್ಮಾಣಕ್ಕಾಗಿ ಪ್ರಸ್ತಾವನೆ ಬಂದಿರುತ್ತದೆ.

2015–16 ನೇ ಸಾಲಿಗೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ವರಹ ಕಟ್ಟಡವನ್ನು ದುರಸ್ತಿಪಡಿಸಲು ಜಿಲ್ಲಾ ಪಂಚಾಯತಿ ವತಿಯಿಂದ ₹ 2.00 ಲಕ್ಷ ನಿಗದಿಪಡಿಸಲಾಗಿದೆ.

ಕೈಗಾರಿಕೆಗಳ ಸ್ಥಾಪನೆ

2253 (3252); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2013–14, 2014–15 ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಭಾರಿ ಹಾಗೂ ಮಧ್ಯಮ ಕೈಗಾರಿಕೆ ಉದ್ದಿಮೆದಾರರು ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದಾರೆಯೇ; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಉದ್ದಿಮೆದಾರರನ್ನು ಆಕರ್ಷಿಸಲು ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) 2013–14, 2014–15 ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಆ) ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ವಿಶೇಷ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಒಳಗೊಂಡ ಕೈಗಾರಿಕಾ ನೀತಿ 2014–19 ನ್ನು ಹೊರತಂದಿದೆ. ಸದರಿ ನೀತಿಯಲ್ಲಿ ಹಾವೇರಿ ಜಿಲ್ಲೆಯ 2 ತಾಲ್ಲೂಕುಗಳನ್ನು (ಹಿರೇಕೆರೂರು, ಹಾನಗಲ್) ವಲಯ–1, 3 ತಾಲ್ಲೂಕುಗಳನ್ನು (ಸವಣೂರು, ಶಿಗ್ಗಾಂವ್, ಹಾವೇರಿ) ವಲಯ–2 ಹಾಗೂ 2 ತಾಲ್ಲೂಕುಗಳನ್ನು (ರಾಣೆಬೆನ್ನೂರು, ಬ್ಯಾಡಗಿ) ವಲಯ–3 ರಲ್ಲಿ ವಿಂಗಡಿಸಿ ವಲಯ–1 ಮತ್ತು ವಲಯ–2 ಗಳಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಲು ಅವಕಾಶ ಕಲ್ಪಿಸಿದೆ.

ರಾಜ್ಯದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು "ಇನ್‌ವೆಸ್ಟ್ ಕರ್ನಾಟಕ 2015" ರ ಸಮಾವೇಶವನ್ನು ನವಂಬರ್ 23 ರಿಂದ 25 ರವರೆಗೆ ಬೆಂಗಳೂರಿನ ಅರಮನೆ ಆವರಣದಲ್ಲಿ ನಡೆಸಲಾಗುವುದು. ಈ ಬೃಹತ್ ಸಮಾವೇಶಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ, ಬೇರೆ ರಾಜ್ಯಗಳಿಂದ ಹಾಗೂ ವಿಶ್ವದ ಎಲ್ಲಾ ದೇಶಗಳಿಂದ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶ ಹೊಂದಿದೆ.